ಸಂ.ಜಂಆ/ಜಾರಿ/ಪವ/ಚಾಲಕರಸೇವೆ/ಹೊರಗುತ್ತಿಗೆ/ಸಿಆರ್18/15-16

ವಾಣಿಜ್ಯ ತೆರಿಗೆ ಜಂಟಿಆಯುಕ್ತರವರ ಕಛೇರಿ
(ಜಾರಿ) ಪಶ್ಚಿಮ ವಲಯ, ಮಂಗಳೂರು.
ದಿನಾಂಕ 06-04-2015.

## ಟೆಂಡರು ಅಧಿಸೂಚನೆ
( ಇ- ಪ್ರೊಕ್ಯೂರಮೆಂಟ್ ಪದ್ದತಿಯ ಮೂಲಕ ಮಾತ್ರ)

ವಿಷಯ:- ವಾಣಿಜ್ಯ ತೆರಿಗೆ ಜಂಟಿಆಯುಕ್ತರು(ಜಾರಿ) ಪ.ವ. ಮಂಗಳೂರು, ಇವರ ಕಛೇರಿಯಲ್ಲಿ ವಾಹನ ಚಾಲಕರ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ತ್ತಾತ್ಕಾಲಿಕವಾಗಿ ಪಡೆಯುವ ಸಲುವಾಗಿ 2015-16ನೇ ಸಾಲಿನ ಉಳಿಕೆ ಅವಧಿಗೆ "ಇ" ಟೆಂಡರು ಆಹ್ವಾನ.

ಉಲ್ಲೇಖ:- ವಾಣಿಜ್ಯ ತೆರಿಗೆ ಆಯುಕ್ತರು, ಬೆಂಗಳೂರು, ಇವರ ಆದೇಶ ಸಂಖ್ಯೆವಿಎಚ್‌ಟಿ/ ಸುತ್ತೋಲೆ-2/2014-15 ದಿನಾಂಕ 31-03-2015.

**********

1. ವಾಣಿಜ್ಯ ತೆರಿಗೆ ಜಂಟಿಆಯುಕ್ತರು(ಜಾರಿ) ಪ.ವ. ಮಂಗಳೂರು, ಇವರ ಕಛೇರಿಯಲ್ಲಿ 2015-16ನೇ (01-06-2015 ರಿಂದ 31-03-2016)ಸಾಲಿನ ಉಳಿಕೆ ಅವಧಿಗೆ ವಾಹನ ಚಾಲಕರ ಸೇವೆಯನ್ನು ಪಡೆಯಲು ಉಲ್ಲೇಖದಲ್ಲಿ ಕಾಣಿಸಿರುವ ಆಯುಕ್ತರ ಆದೇಶದಂತೆ "ಇ"ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಏಜನ್ಸಿಗಳಿಂದ ಟೆಂಡರು ಆಹ್ವಾನಿಸಿದ್ದು ಕರ್ನಾಟಕ ಪಾರದರ್ಶಕ ಅಧಿನಿಯಮ 1999 ಮತ್ತು 2000ರ ನಿ 2(ಸಿ) ಯ ಪ್ರಕಾರ ದ್ವಿ ಲಕೋಟೆ ಪದ್ದತಿಯಲ್ಲಿ "ಇ" ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರುಗಳನ್ನು ಆಹ್ವಾನಿಸಲಾಗಿದೆ. (ತಾಂತ್ರಿಕ ಬಿಡ್ಡು ಮತ್ತು ಆರ್ಥಿಕ ಬಿಡ್ಡು)(1)ನೇ ಲಕೋಟೆ (ಎ)ನಲ್ಲಿ ಎಲ್ಲಾ ಸಂಬಂದಿಸಿದ ದಾಖಲಾತಿಗಳು ಹಾಗೂ ರೂ 20000 (ಇಪ್ಪತ್ತು ಸಾವಿರ) ಇ ಎಂ. ಡಿ. ಹಣ ಹಾಗೂ (2)ನೇ ಲಕೋಟೆ(ಬಿ)ಯಲ್ಲಿ ತಮ್ಮ ದರವನ್ನು ತುಂಬಿಸಿ ಸಲ್ಲಿಸತಕ್ಕದ್ದು.

2.ದಿನಾಂಕ 6-04-2015ರಿಂದ ಟೆಂಡರುದಾರರು ಕರ್ನಾಟಕ ಸರಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರು ಡಾಕ್ಯುಮೆಂಟ್‌ಗಳನ್ನು ಪಡೆಯಬಹುದಾಗಿರುತ್ತದೆ.(Down load).

3.ಟೆಂಡರುಗಳನ್ನು ಕರ್ನಾಟಕ ಸರಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಆನ್‌ಲೈನ್ ಮುಖಾಂತರ ದಿನಾಂಕ 06-05-2015ರ ಅಪರಾಹ್ನ4.00 ಗಂಟೆ (16.00 ಗಂಟೆ) ಒಳಗೆ ಸಲ್ಲಿಸತಕ್ಕದ್ದು.

4.ದಿನಾಂಕ 07-05-2015ರಂದು ಸಾ.4.30(16-30) ಗಂಟೆಗೆ ತಾಂತ್ರಿಕ ಬಿಡ್ಡುಗಳನ್ನು ತೆರೆಯಲಾಗುತ್ತದೆ. ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕವನ್ನು ಮುಂದೆ ತಿಳಿಸಲಾಗುವುದು.

5.ಟೆಂಡರುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಸಲ್ಲಿಸಬೇಕು ಮತ್ತು ಖಾಯಂ ಪ್ರತಿಗಳು ಅಂಗೀಕಾರ್ಹವಲ್ಲ.

6.ಹೆಚ್ಚಿನ ವಿವರಗಳನ್ನು ಟೆಂಡರು ಡಾಕ್ಯುಮೆಂಟ್‌ನಲ್ಲಿ ಇಲ್ಲವೇ ವಾಣಿಜ್ಯ ತೆರಿಗೆ ಜಂಟಿಆಯುಕ್ತರು(ಜಾರಿ) ಪ.ವ. ಮಂಗಳೂರು, ಇವರ ಕಛೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ವಾಣಿಜ್ಯ ತೆರಿಗೆ ಜಂಟಿಆಯುಕ್ತರು
(ಜಾರಿ) ಪಶ್ಚಿಮ ವಲಯ ಮಂಗಳೂರು.

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು
(ಎನ್‌ಫೋರ್ಸ್‌ಮೆಂಟ್), ಪಶ್ಚಿಮ ವಲಯ, ಮಂಗಳೂರು

ಪ್ರತಿಗಳು:

1.ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಟೆಂಡರು ಬುಲೆಟಿನ್ ಅಧಿಕಾರಿಗಳು, ಇವರಿಗೆ ಸಲ್ಲಿಸುತ್ತಾ ಜಿಲ್ಲಾ ಟೆಂಡರು ಬುಲೆಟಿನ್ನಲ್ಲಿ ಪ್ರಕಟಿಸಲು ಕೋರಿದೆ (10ಪ್ರತಿಗಳು).

2.ಮಾನ್ಯ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾಪಂಚಾಯತ್ ಮಂಗಳೂರು ಇವರಿಗೆ ಸಲ್ಲಿಸುತ್ತಾ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.

3.ಕಾರ್ಯನಿರ್ವಹಣಾ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡುಜಲ ಸಾರಿಗೆ ಇಲಾಖೆ ಮಂಗಳೂರು ವಿಭಾಗ ಮಂಗಳೂರು ಇವರಿಗೆ ಸಲ್ಲಿಸುತ್ತಾ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.

4.ಪ್ರಾದೇಶಿಕ ಸಾರಿಗೆ ಅಧಿಕಾರಿ, ದ.ಕ. ಮಂಗಳೂರು, ಇವರಿಗೆ ಸಲ್ಲಿಸುತ್ತಾ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.

5.ವಾಣಿಜ್ಯ ತೆರಿಗೆ ಆಯುಕ್ತರು, ಗಾಂಧಿನಗರ ಬೆಂಗಳೂರು ಇವರಿಗೆ, ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.

6.ಜಂಟಿ ಆಯುಕ್ತರು 'ಇ' ಆಡಳಿತ ವಾಣಿಜ್ಯ ತೆರಿಗೆ ಕಾರ್ಯಾಲಯ 3ನೇ ಮಹಡಿ ಗಾಂಧಿನಗರ ಬೆಂಗಳೂರು-9 ಇವರಿಗೆ ಸಲ್ಲಿಸುತ್ತಾ ಈ ಟೆಂಡರನ್ನು ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು ಕೋರಿದೆ.

6.ಕಚೇರಿಯ ಸೂಚನಾ ಫಲಕಕ್ಕೆ.